Regd. No. M 1299 SATYAVADI Founded 1917

ಸತ್ಯವಾದಿ

(ಆರ್ಯಮಾನ್ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 30 ಸಂಚಿಕೆ 93 | ಬುಧವಾರ 4—12—46 | ಬಿಡಿ ಪ್ರತಿ 3 ಪೈ

ಅಕ್ಕಿ ರೇಷನ್ ಹೆಚ್ಚಿಸಲಾಗುತ್ತದೆ !

ಮೈಸೂರಿನಲ್ಲಲ್ಲ — ಮದರಾಸಿನಲ್ಲಿ

ಅಕ್ಕಿ ರೇಷ್ ಹೆಚ್ಚುವುದೇ ಮದರಾಸಿನಲ್ಲಿ

ಮದರಾಸು ಡಿ 3 — ಡಿಸೆಂಬರ್ 15 ರಿಂದ ಮದರಾಸು ಸರಕಾರವು ಅಕ್ಕಿ ರೇಷನ್ನು 8 ಔನ್ಸಿನಿಂದ 10 ಔನ್ಸಿಗೆ ಹೆಚ್ಚಿಸಲು ನಿರ್ಧರಿಸಿದೆ.

ಶ್ರೀ ರಾಮಚಂದ್ರರಾವ್

ಬಾಂಭೋಕೆ ಯವರು

ಹಿಂದು ತಿಂಗಳಿಂದ ರಜದ ವೇಲೆದ್ದ ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬಾಂಭೋರೆ ಯವರು ಮತ್ತೆ ಅಧಿಕಾರ ಸೂತ್ರವನ್ನು ವಹಿಸಿಕೊಂಡರು.

ಕಾಳಸಂತೆಗೆ ಪ್ರೋತ್ಸಾಹ! 5 ಕೋಟಿ ಜನರ ವಿರೋಧ

ಮದರಾಸು ಡಿ 3 — ಮದರಾಸಿನ ಒಟ್ಟೆ ಸಂಬಂಧದ ನೀತಿಯು ಅತಿ ವೈಭವವಾಗಿ ಅಭಿವೃದ್ಧಿಗೊಳ್ಳುವ ಕಾಳಸಂತೆಗೆ ಅಚ್ಚು ಕಟ್ಟಿದ್ದಲ್ಲದೆಯಂಕುರಾರ್ಪಣವೆಂದೂ ಇದನ್ನು 5 ಕೋಟಿ ಜನರು ಪ್ರತಿಭಟಿಸುತ್ತಿರುವರೆಂದೂ ಮದರಾಸು ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾದ ಮಿ|| ಟರ್ನರವರು ಸಂಸ್ಥೆಯ ವಾರ್ಷಿಕ ಸಭೆಯಲ್ಲಿ ಹೇಳಿದರು.

ಮುಷ್ಕರ ಹೂಡಲು ಅನುಮತಿ ಕೊಡಬೇಕು

ಸಕ್ಕರೆ ಕೆಲಸಗಾರರ ತೀರ್ಮಾನ

ಮೈಸೂರು ಸಕ್ಕರೆ ಕಂಪನಿ ಕೆಲಸಗಾರರ ಸಂಘದ ಕಾರ್ಯ ನಿರ್ವಾಹಕ ಮಂಡಲಿಯು ವಿಶೇಷ ಸಭೆಯು 1-12-46 ನೇ ದಿನ ಉಪಾಧ್ಯಕ್ಷರಾದ ಶ್ರೀ ಹೆಜ್ ಎಸ್. ಮಾಸ್ತಿಗೌಡರವರ ಅಧ್ಯಕ್ಷತೆಯಲ್ಲಿ ಸೇರಿ ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿತು.

1) ತಾ| 26-9-46 ರಲ್ಲಿ ಕೊಟ್ಟ ನೋಟಿಸ್ ಅನ್ವಯ ಛೇಂಜ್‌ಗೆ ಎಡೆಯು ತಿಂಗಳಾದರೂ ಆದರಲ್ಲಿರುವ 2 ಮತ್ತು 8 ನೇ ವಿಷಯಗಳ ವಿಚಾರದಲ್ಲಿ ಲೇಬರ್ ಅಸಿಸ್ಟೆಂಟ್ ಕಮೀಷನರವರು ನಿರ್ದಿಷ್ಟವಾದ ತೀರ್ಮಾನಕ್ಕೆ ಬಾರದಿದ್ದುದಕ್ಕಾಗಿ ಈ ಸಭೆಯು ತನ್ನ ವಿಷಾದವನ್ನು ವ್ಯಕ್ತ ಪಡಿಸುತ್ತಾ, ಶಾಸನವು ಪ್ರಕಾರ ಇದಕ್ಕೆ ಆಗಬೇಕಾಗುವ ಕಾಲಾವಕಾಶ ಮುಗಿದುದರಿಂದ ಮುಷ್ಕರ ಹೂಡಲು ಅವಕಾಶ ಕೊಡಬೇಕೆಂದು ಲೇಬರ್ ಕಮೀಷನರವರನ್ನು ಕೇಳಿಕೊಳ್ಳಬೇಕು.

2) ನೋಟ್ಯಂಡ ನಿಜ್ಜಯಕ್ಕೆ 10-12-46 ರ ಒಳಗೆ ಲೇಬರ್ ಕಮೀಷನರವರಿಂದ ಉತ್ತರಬಾರದಿದ್ದರೆ ಮುಷ್ಕರಕ್ಕೆ ಜಪ್ಪಿಗೆ ಇದೆಯೆಂದು ಭಾವಿಸತಕ್ಕದ್ದೆಂದು ತೀರ್ಮಾನಿಸಲಾಯ್ತು.

ಎ. ರಾಮಣ್ಣ,
ಕಾರ್ಯದರ್ಶಿ

ಸಂಸ್ಥಾನದ ಆಹಾರ ಪರಿಸ್ಥಿತಿ

'ಆಹಾರ ಪರಿಸ್ಥಿತಿಯಲ್ಲಿ ಬದಲಾವಣೆ ಏನೂ ಆಗಿಲ್ಲ. ಸಂಸ್ಥಾನಾದ್ಯಂತ ಶುಭವಾದ ಮಳೆ ಬಿದ್ದಿದೆ. ಶಿವಮೊಗ್ಗ ಕಡೂರು ಮತ್ತು ಚಿತ್ರದುರ್ಗ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಭತ್ತ ಮತ್ತು ಜೋಳದ ಬೆಳೆಗಳು ರೋಗಗಳಿಂದ ತೊಂದರೆಗೊಳಗಾಗಿವೆ. ಉಳಿದ ಭಾಗಗಳಲ್ಲಿ ಬೆಳೆ ಚೆನ್ನಾಗಿದೆಯೆಂದು ವರದಿಯಾಗಿದೆ. ಜಗಳೂರು ಮತ್ತು ದಾವಣಗೆರೆ ತಾಲ್ಲೂಕುಗಳಲ್ಲಿ ಜೋಳದ ಬೆಳೆಗೆ 'ಕರ್ರೀ ರೋಗ' ಎಂಬುದರಿಂದ ತೊಂದರೆಯಾಗಿ ಅಲ್ಪ ಕಾಳು ದೊರಯುಲಿದೆ. ಕಾಲಾನುಗುಣ ಎಚ್ಚರಿಕೆ ಪಡೆದು ರೋಗನಾಶಕ್ಕೆ ಪ್ರಯತ್ನಿಸಿದರೂ ದೊರೆಯಬೇಕಾದ ಕಾಳಿಗಿಂತಲೂ ಕಡಿಮೆ ದೊರೆಯಲಿದೆ ಎಂಬುದಾಗಿ ಸರ್ಕಾರಿ ಪ್ರಕಟನಾಧಿಕಾರಿಗಳು ಪತ್ರಿಕಾ ಪ್ರಕಟನೆಯನ್ನು ಪ್ರಕಟಿಸಿದ್ದಾರೆ.

ಬೆಲ್ಲದ ಪುರಾಣ

ಮುಂಬಾಯಿ ಸರಕಾರವು ಮೊನೆ ಬೆಲ್ಲದ ಬೆಲೆ ನಿಯಂತ್ರಿಸಿದ್ದಾಗ ಅದರ ಮೇಲಿನ ನಿಯಂತ್ರಣವನ್ನು ತೆಗೆದು ಹಾಕಬೇಕೆಂದು ಪುಣೆಯ ಬೆಲೆ ಸಲಹೆ ಸಮಿತಿಯು ನಿರ್ಧರಿಸಿತ್ತು. ಆದರೆ ನಿಯಂತ್ರಣವು ಹೋದ ಕೂಡಲೇ ಬೆಲ್ಲದ ದರವು ಇಮ್ಮಡಿಯಾಯಿತು. ಇದೀಗ ಮತ್ತೆ ಅನ್ಯ ಸಭೆ ಗೂಡಿ ಬೆಲ್ಲದ ದರ ನಿಯಂತ್ರಣ ಮಾಡಬೇಕೆಂದೂ ಮತ್ತು ಅದನ್ನು ಸೀದಾ ಪದ್ಧತಿಯಂತೆ ಜನತೆಗೆ ಪೂರೈಸಬೇಕೆಂದು ಸರಕಾರಕ್ಕೆ ಕೇಳಿಕೊಂಡಿದ್ದಾರೆ.

೧೪ ನೇ ತಾರೀಖು ಕಾಂಗ್ರೆಸ್ ಅಧ್ಯಕ್ಷರಿಗೆ ಬಿನ್ನವತ್ತಳೆ

ಕಾಂಗ್ರೆಸ್ ಅಧ್ಯಕ್ಷರಿಗೆ 14-12-46 ನೇ ಶನಿವಾರ ಸಾಯಂಕಾಲ 5 ಗಂಟೆಗೆ ಸಕ್ಕರೆ ಕಾಲೋನಿಯಲ್ಲಿ ಬಿನ್ನವತ್ತಳೆ ಮತ್ತು ನಿಧಿಯನ್ನರ್ಪಿಸಲು ಸಕ್ಕರೆ ಕೆಲಸಗಾರರ ಸಂಘದವರು ನಿರ್ಧರಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷರು ಮೈಸೂರು ಜಿಲ್ಲಾ ಪ್ರವಾಸವನ್ನು ಮುಂದಿನ ತಿಂಗಳು ಕೈಗೊಳ್ಳುವರೆಂದು ತಿಳಿಯಬಂದಿದೆ.

ಜಗದ್ಗುರುಗಳಿಗೆ ಬೀಳ್ಕೊಡುವ ಸಮಾರಂಭ

ಶ್ರೀ ದ್ವಾರಕಾ ಪೀಠದ ಜಗದ್ಗುರುಗಳು ಶ್ರೀ ಶಂಕರಾಚಾರ್ಯ ಶ್ರೀ ಅಭಿನವ ಸಚ್ಚಿದಾನಂದ ತೀರ್ಥ ಮಹಾರಾಜರವರು ಸಿದ್ಧಪುರದಿಂದ ಪಟಾನಿಗೆ ಪ್ರಯಾಣ ಮಾಡಿದುದಕ್ಕಾಗಿ ಭಾರಿ ಬೀಳ್ಕೊಡುವ ಸಮಾರಂಭ ಜರುಗಿತು. ಸಿದ್ಧಪುರದಲ್ಲಿ ತಾ|| 1 ರಲ್ಲಿ ವ್ಯಾಪ್ತಿಣರ ಪ್ರಚಂಡ ಸಭೆ ನಡೆಯು ಸ್ವಾಮಿಗಳಿಗೆ ಬಿನ್ನವತ್ತಳೆಯು ಜಿಲ್ಲಿ ಕರಾಡಿಗೆಯಲ್ಲಿ ಅರ್ಪಿಸಲಾಯಿತ. ಅನೇಕ ಪ್ರಮುಖ ವಿದ್ವಾಧಿಕರು ಭಾಷಣಗಳನ್ನು ಮಾಡಿ ಅತ್ಯಧಿಕ ಸಂಖ್ಯೆಯಲ್ಲಿ ಹಾರಗಳನ್ನು ಅರ್ಪಿಸಿದರು. ಶ್ರೀ ಜಗದ್ಗುರುಗಳು ಅವರವರ ಯೋಗ್ಯತಾನುಸಾರ ಬಿರುದು ಸರ್ಟಿಫಿಕೇಟುಗಳನ್ನು ದಯಪಾಲಿಸಿದರು. ಬೀಳ್ಕೊಡಲು ಬಂದ ಭಾರಿ ಮೆರವಣಿಗೆ ವಿಸರ್ಜಿಸಲಾಗಿದ್ದಿತು. ಸಾವಿರಾರು ಮಂದಿಯು ಕಣ್ಣುಗಳಲ್ಲಿ ನೀರು ಬಂದು ಶ್ರೀ ಸ್ವಾಮಿಗಳ ಮೇಲೆ ಅವಂಗಿರುವ ಪ್ರೀತಿ ವಿಶ್ವಾಸ ವ್ಯಕ್ತವಾಯಿತು ಶ್ರೀ ಸ್ವಾಮಿಗಳು ಮೋಟಾರಿನಲ್ಲಿ ಸಿದ್ಧಪುರದಿಂದ ಪಟಾನ್‌ಗೆ ಒಂದರು. ಈ ಊರಿನಲ್ಲಿ ಎಂದೂ ಇಲ್ಲದ ಸಂಭ್ರಮ ಒದಗಿದೆ. ಜಗದ್ಗುರುಗಳು ಬಂದನಂತರ ಭಾರಿ ಬಹಿರಂಗ ಸಭೆ ನಡೆಸಲ್ಪಟ್ಟು ಶ್ರೀ ಜಗದ್ಗುರುಗಳ ಅಮೋಘವಾದ ಭಾಷಣ ಮಾಡಿದರು. ಪ್ರತಿದಿವಸ ಸಂಜೆಯೂ ಮತ ವಿಚಾರ ಸಾಮಾಜಿಕ್ಷಮತ್ತು ತಾತ್ಕಾಲಿಕ ವಿಚಾರಗಳ ಮೇಲೆ ಭಾಷಣ ಮಾಡುವರು.

ಇಂದಿನ ವರ್ತಮಾನ

ಬೆಂಗಳೂರು ಡಿ 3 — ರೋಟರಿ ಇಂಟರ್ ನ್ಯಾಷನಲ್ ಸಂಸ್ಥೆಯ ಅಧ್ಯಕ್ಷರಾದ ಮಿ|| ಹೆಡ್ಕ್ರಿರವರು ಶ್ರೀಮನ್ಮಹಾರಾಜರಮನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಆಸ್ಟ್ರೇಲಿಯಾಕ್ಕೆ ತಿರುವಾಂಕೂರಿನಿಂದ ತೆಂಗಿನ ನಾರಿನ ಹಗ್ಗ ಚಾಪೆಗಳನ್ನು ತರಿಸುವ ವಿಷಯದಲ್ಲಿ ಮದರಾಸಿನಲ್ಲಿ ಆಸ್ಟ್ರೇಲಿಯಾ ಮತ್ತು ತಿರುವಾಂಕೂರು ವ್ಯಾಪಾರ ನಿಯೋಗಗಳಿಗೆ ಮಾತುಕತೆ ನಡೆದಿದೆ.

ನ್ಯೂಯಾರ್ಕ್ ಡಿ 3 — ವಿಶ್ವ ಸಂಸ್ಥೆಯಲ್ಲಿ ಸ್ಪೇನಿನ ವಿಚಾರ ಚರ್ಚೆ ಬಂದು ಜ|| ಫ್ರಾಂಕೊ ರಾಜೀನಾಮೆ ಕೊಡಬೇಕೆಂದೂ ಪ್ರಜಾ ಪ್ರತಿನಿಧಿ ಸರ್ಕಾರ ಸ್ಥಾಪನೆಯಾಗಬೇಕೆಂದೂ ಅಲ್ಲೀವರೆಗೆ ಪ್ರಪಂಚ ಸಂಸ್ಥೆ ಸ್ಪೇನಿಗೆ ಬಹಿಷ್ಕಾರ ಹಾಕಬೇಕೆಂದೂ ಇತರ ರಾಜ್ಯ ಪ್ರತಿನಿಧಿಗಳು ಸೂಚಿಸಿದರು.

ಆಟಂ ಬಾಂಬಿಗಿಂತ ಕ್ರೂರ ಅಸ್ತ್ರಗಳ !

ನ್ಯೂಯಾರ್ಕ್ ಡಿ 2— ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಶಸ್ತ್ರ ಸನ್ಯಾಸ ವಿಷಯ ಮಾತನಾಡುತ್ತಾ, ಬ್ರಿಟಿಷ್ ಪ್ರತಿನಿಧಿ ಸರ್ ಷಾಕ್ರಾಸರು ಆಟಂ ಬಾಂಬೇ ಅತಿ ಕ್ರೂರ ಅಸ್ತ್ರವೆಂದು ಹೇಳಲಾಗುವುದಿಲ್ಲವೆಂದೂ ಅಕ್ಷಿಂತ ತೀವ್ರ ಕ್ರೂರವಾದ ಅಸ್ತ್ರಗಳಿರುವೆಂದೂ ತಿಳಿಸಿದರು

ತಾರೆಗಳ ಸಂಬಳ ಇಳಿತಾಯಿ

ಚಲನಚಿತ್ರ ಕೈಗಾರಿಕೆಯ ಸಮೃದ್ಧಿಯ ದಿನಗಳು ಮುಗಿದಂತೆ ತೋರಿದೆ. ತಾರೆಗಳ ತಲಬು ಇಳಿಯುತ್ತಿದೆ. ದಶ ಸಾವಿರ ಸಂಖ್ಯೆಗೇರಿದ ತಾರೆಗಳೀಗ ಒಂದು ಸಾವಿರಕ್ಕಿಂತಲೂ ಕೆಡಿಮೆ ಪಡೆಯುತ್ತಿದ್ದಾರೆ. ಭತ್ತೆಗಳೇನೂ ಇಲ್ಲ.

ಅನೈತಿಕ ಚಿತ್ರಗಳು

ಲಕ್ನೋ ಸಿವಿಲ್ ಇಂಜನಿಯರಿಂಗ್ ಶಾಖೆಯ ವಿದ್ಯಾರ್ಥಿಗಳು ಇತ್ತೀಚೆಗಿನ ಒಂದು ಸಭೆಯಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ ಇನ್ನು ಮುಂದೆ ಅನೈತಿಕ ಚಿತ್ರಗಳ ಪ್ರದರ್ಶನಕ್ಕೆ ಅವಕಾಶಕೊಡಬಾರದೆಂಬ ಠರಾವನ್ನು ಮಂಜೂರ್ಮಾಡಿದರು.

ಮೈಸೂರು ಸಿಟಿ ರೇಷನಿಂಗ್

No. R I - 188 / 1946-47

ತಾ || 3–12–46

ಮೈಸೂರು ಸಿಟಿಯಲ್ಲಿರುವ ಎಲ್ಲಾ ರೇಷ್ ಡಿಪೋಗಳೂ, ಮತ್ತು ಮೊಹಲ್ಲಾ ಸಬ್ ಗೋಡೌನ್‌ಗಳೂ ಸಹಾ ಇದೇ ಮಾಹೆ 8ನೇ ತಾರೀಖು ಗುರುವಾರ 'ಹೊಸರಂ' ಪಡಬ್ಬದ ಪ್ರಯುಕ್ತ ಪೂರ್ತಿ ದಿನ ಮುಚ್ಚಲ್ಪಡುತ್ತವೆ

(ಸಹಿ) ಅಬ್ದುಲ್ ರಜಾಕ್
ರೇಷನಿಂಗ್ ಆಫೀಸರ್
ಮೈಸೂರು ಸಿಟಿ

ಆಯುರ್ವೇದ ಸಮ್ಮೇಳನ

ನಿಖಿಲ ಕರ್ಣಾಟಕ ಆಯುರ್ವೇದ ಸಮ್ಮೇಳನದ 15 ನೇ ಅಧಿವೇಶನವು ಗದಗಿನಲ್ಲಿ ಇದೇ ತಿಂಗಳ 28 ಮತ್ತು 29 ನೆಯ ತಾರೀಖುಗಳಲ್ಲಿ ನೇರುವುದು. ಸಮ್ಮೇಳನದಲ್ಲಿ ಆಯುರ್ವೇದ ಪ್ರಗತಿಗೆ ಸಾದಕವಾದ ಅನೇಕ ಮಹತ್ವದ ವಿಷಯಗಳು ಬರಲಿರುವುದರಿಂದ ಕರ್ಣಾಟಕ ಪ್ರಾಂತ್ಯದ ವೈದ್ಯರೆಲ್ಲರೂ ಸಮ್ಮೇಳನದಲ್ಲಿ ಭಾಗವಹಿಸುವುದು ಅಗತ್ಯವು. ಸಮ್ಮೇಳನದಲ್ಲಿ ನಿರ್ಣಯಗಳನ್ನು ಮಂಡಿಸಲು ಇಚ್ಛಿಸುವವರು ಸದರೀ ತಮ್ಮ ನಿರ್ಣಯವನ್ನು ಇದೇ ತಾ || 20 ರ ಒಳಗಾಗಿ ಮಂಡಲದ ಕಾರ್ಯಾಲಯಕ್ಕೆ ಮೈಸೂರಿಗೆ ಕಳುಹಿಸಿಕೊಡಬೇಕಾಗಿ ಕಾರ್ಯದರ್ಶಿಗಳಾದ ಶ್ರೀ ಕೆ. ಪಿ. ಪುರಾಣಿಕರು ವಿನಂತಿ ಮಾಡಿರುವರು.

ಮನುಷ್ಯನಿಗೆ ಪಡೆಯಲನುಕೂಲವಾದ ಎಲ್ಲಾ ಭಾಷೆಗಳಲ್ಲಿಯೂ ಉದಾತ್ತವಾದದ್ದು ಸಂಸ್ಕೃತ ಭಾಷೆಯಾಗಿದೆ.

ಫ್ರಾಂಕ್ಲಿನ್ ಯೆಡ್ಗರ್ಟ್

ಪತ್ರಿಕಾ ತಂತಿ ಶಬ್ದಗಳು

ಮಿರತ್ ಕಾಂಗ್ರೆಸ್ ಅಧಿವೇಶನ ಕಾಲದಲ್ಲಿ ಅಂಚೆ ಮತ್ತು ತಂತಿ ಇಲಾಖೆಯವರು 1600000 ಶಬ್ದಗಳಷ್ಟು ತಂತಿ ಸುದ್ದಿಯನ್ನು ಪತ್ರಿಕೆಗಳಿಗೆ ಕಳಿಸಿದ್ದರಂತೆ

ರಾಮಘಡ ಕಾಂಗ್ರೆಸಿನ ಅಧಿವೇಶನದಿಂದ ಮಿರತ್ ಅಧಿವೇಶನ ವರೆಗಿನ ಸುಮಾರು ಆರೂವರೆ ವರ್ಷದ ಕಾಂಗ್ರೆಸ್ ಕಾರ್ಯಕ್ರಮದ ಚಿತ್ರ ತಯಾರಾಗುತ್ತಿರುವುದಾಗಿ ಗೊತ್ತಾಗಿದೆ.

For Quality Printing

L. N. Press

Sriramp t, MYSORE

Edited, Printed and Published by M. S Krishna Rao at the Satyavadi Press Chamaraj Agrahar Mysore.

At Opera — From 29–11–46

Uttami

ಕಾಳಿ ಎಸ್. ರತ್ನ, ಬಿ.ಎಸ್. ದೊರೈರಾಜ್
ಸ್ವಾಮಿನಾಥ್, ಬಿ.ಎಸ್- ಕೃಷ್ಣವೇಣಿ
ರಾಜಾಕಾಂತಂ ಪಾತ್ರಪಹಿಸಿರುವ

ಉತ್ತಮಿ

(ತಮಿಳು ಚಿತ್ರ)

At Ranjit — From 28–11–46

ಹುಮಾಯೂನ್

ಅಶೋಕಕುಮಾರ್ ವೀಣಾ ನಾಗೇಶ್ವರ ಚಂದ್ರಮೋಹನ್
ಪಾತ್ರವಹಿಸಿರುವರು

HUMAYUN

ಸುಖ ಆರೋಗ್ಯ ಆನಂದದಾಯಕ



ಜೀವಿತಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ತರ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಳಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪, ಗೋವಿಂದಪ್ಪ ನಾಯಕ್ ಸ್ಟ್ರೀಟ್, ಜಿ. ಟಿ. ಮದರಾಸು.

ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್

ಪ್ರೆಸಿಡೆಂಟರವರ ಆಫೀಸ್

ನೋಟಿಫಿಕೇಷನ್ ನಂಬರ್ R 8 ತಾ || 20–11–46

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ—

ಮೈಸೂರು ಸಿಟಿ ಅಕ್ಕಪ್ಪಯಿ ಆಫೀಸು ಬಳಿ ಇರುವ, ಸಿಟಿ ಬಸ್ ಸ್ಟಾಂಡಿನಲ್ಲಿ ಮುನಿಸಿಪಾಲಿಟಿಯವರು ಕಟ್ಟಿಸಿರುವ ರೆಸ್ಟೋರೆಂಟ್ ಬಿಲ್ಡಿಂಗನ್ನು 1947 ನೇ ಜನವರಿ ಮಾಹೆ ಒಂದನೇ ತಾರೀಖು ಲಾಗಾಯಿತು ಮೂರು ವರ್ಷಗಳ ಕಾಲ- ಅಂದರೆ 1949 ನೇ ಡಿಸೆಂಬರ್ ಮಾಹೆ ಅಖೈರ್‌ವರಿವಿಗೆ ಹೋಟಲನ್ನು ಇಟ್ಟುಕೊಂಡು ವ್ಯಾಪಾರ ನಡೆಸುವ ಬಗ್ಗಾಗಿ ಮಾಹೆಯಾನ ಬಾಡಿಗೆಗೆ ಪಡೆಯುವ ಹಕ್ಕನ್ನು ಟೆಂಡರು ಮೂಲಕ ಏಲೇವಾರಿ ಮಾಡಲಾಗುತ್ತೆ. ಮೇಲ್ಕಂಡ ಹಕ್ಕನ್ನು ಪಡೆಯಲು ಇಚ್ಛವುಳ್ಳವರು ಡಿಸೆಂಬರ್ ಮಾಹೆ 9 ನೇ ತಾರೀಖು ಮಧ್ಯಾಹ್ನ ಗಂಟೆ ಪೊಳಗಾಗಿ ಟೆಂಡರ್ ದರಖಾಸ್ತುಗಳನ್ನು ಹಾಕಿಕೊಳ್ಳತಕ್ಕದ್ದಿರುತ್ತೆ. ಹೆಚ್ಚಿಗೆ ವಿಷಯಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸ್ ನಡೆಯುವ ಕಾಲದಲ್ಲಿ ತಿಳಿಯಬಹುದು.

S. Murighendraswamy
For President